doc-579
T.P-2

Reg No B G 155 ಶ್ರೀ 2 ಪೈಸೆ 3-11-72

In The State First Golden Jubilee Celebrated Paper 'Satyavadi' daily, Mysore 4

# ಮೈಸೂರು ದಸರಾ ವಸ್ತುಪ್ರದರ್ಶನ
## ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 4-11-1972 ಶನಿವಾರ

ಕಲಾಕ್ಷೇತ್ರ

| | | |
|---|---|---|
| 6 ರಿಂದ 7 ಸಂಜೆ | ಶ್ರೀ ವಿ. ನಟರಾಜ್, ಮೈಸೂರು | ನಾದಮೇಳ |
| 7 ರಿಂದ 9-30 ರಾತ್ರಿ | ಚಲನಚಿತ್ರ ಹಿನ್ನಲೆಗಾಯಕಿ ಶ್ರೀಮತಿ ಪಿ. ಲೀಲಾ, ಮದರಾಸು | ವಿಶೇಷ ಸಂಗೀತ |

ಜೀವನರಾಯನ ಕಟ್ಟೆ

| | | |
|---|---|---|
| 6 ರಿಂದ 7 ಸಂಜೆ | ಶ್ರೀಮತಿ ಸಿ. ಆರ್. ಪದ್ಮ, ಮೈಸೂರು | ಸಂಗೀತ |
| 7 ರಿಂದ 8 ರಾತ್ರಿ | ಶ್ರೀಮತಿ ಬಿ ಎಸ್ ಸರಸ್ವತಿ, ಮೈಸೂರು | ಸಂಗೀತ |
| 8 ರಿಂದ 9-30 | ಶ್ರೀಮತಿ ಪದ್ಮ ರಾವ್, ಬೆಂಗಳೂರು | ಸಂಗೀತ |

# ವುಡ್‌ಲಾಂಡ್ಸ್ 1 11 72 ರಿಂದ 5 ದಿನಗಳು ಮಾತ್ರ

ಕನ್ನಡ ರಾಜ್ಯೋತ್ಸವದ 16 ನೇ ವರ್ಷದ ಪ್ರಯುಕ್ತ

ಅಶ್ವಥ್, ಗಂಗಾಧರ್, ಕಲ್ಪನ, ಪೆಂಡರೀಬಾಯಿ, ಆರತಿ ಅಭಿನಯಿಸಿರುವ

ಅಮೋಘ ಕನ್ನಡ ಚಿತ್ರ ಪ್ರದರ್ಶನ

ರಾತ್ರಿ ಸಹೋದರರ

# ಗೆಜ್ಜೆ ಪೂಜೆ

# ಅಪರಾ 3 ನೇ ವಾರ
# ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪೆಂಡರೀಬಾಯಿ, ಸಂಧ್ಯಾ ರಾಣಿ, ಜಯಶ್ರೀ, ರೇವತಿದೇವಿ ದಿನ 3 ಪ್ರದರ್ಶನಗಳು

Edited Printedand Published by Dharmapracharanirata M S Krishna Rao ( Propretor ) at the Satyavad. Press Chamarajapuram Mysore

### ರಾಂಜಿ ಟ್ರೋಫಿ

ಮೈಸೂರ — ತಾ||.4 ರಂದು ಪ್ರಾರಂಭವಾಗುವ ಮೈಸೂರು ಮತ್ತು ಆಂಧ್ರ ನಡುವಣ ದಕ್ಷಿಣ ವಲಯದ ರಂಜಿ ಟ್ರೋಫಿ ಕ್ರಿಕೆಟ್ ಪಂದ್ಯವನ್ನು ಪ್ರವಾಸಿ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ಉದ್ಘಾಟಿಸುವರು ; ಪುರಸಭಾಧ್ಯಕ್ಷ ಶ್ರೀ ಸೋಮಸುಂದರಂ ರವರು ಸಂಸ್ಮರಣ ಪ್ರತಿಯನ್ನು ಬಿಡುಗಡೆ ಮಾಡುವರು.

○

### ನಾಟಕ ಸ್ಪರ್ಧೆ

ಮೈಸೂರು— ಜಿಲ್ಲಾ ನಾಟಕ ಅಕಾಡಮಿ ಆಶ್ರಯದಲ್ಲಿ ಏರ್ಪಡಿಸಿರುವ ಹವ್ಯಾಸಿ ನಾಟಕ ಸ್ಪರ್ಧೆ ಇಂದಿನಿಂದ ಪ್ರಾರಂಭ.

○

### ರಾಜ್ಯೋತ್ಸವ

ಬೆಂಗಳೂರು— ರಾಜ್ಯೋತ್ಸವವು ವೈಭವವಾಗಿ ನೆರವೇರಿತು – ಕಂಠೀರವ ಸ್ಟೇಡಿಯಂನಲ್ಲಿನ ಮಕ್ಕಳ ರ್ಯಾಲಿ ನೇತ್ರಾನಂದಕರವಾಗಿತ್ತು : ಗೌರ್ನರರು ಕನ್ನಡದಲ್ಲಿ ಭಾಷಣಮಾಡಿ ರಾಜ್ಯದಲ್ಲಿ ಶಾಂತಿ ಮತ್ತು ಅಭ್ಯುದಯಕ್ಕೆ ಜನರ ಸಹಕಾರ ಕೋರಿದರು – ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ 13ಮಂದಿಗೆ ಅವಾರ್ಡು ಕೊಟ್ಟು ಸನ್ಮಾನಿಸಲಾಯಿತು: ಮುಖ್ಯ ಮಂತ್ರಿಗಳು– ರಾಜ್ಯದ ಹೆಸರು " ಕರ್ನಾಟಕ " ವೆಂದು ಬದಲುಗೊಳ್ಳುವುದು ಕೆಲವು ದಿನಗಳ ವಿಚಾರವೆಂದು ಹೇಳಿ, ರಾಜ್ಯದ ಏಳಿಗೆಗೆ ಎಲ್ಲರೂ ಶ್ರಮಿಸಬೇಕೆಂದರು –ಕನ್ನಡ ಚಳವಳಿಗಾರರು ಭಾರಿ ಮೆರವಣಿಗೆ ನಡೆಸಿ, ನಂತರ ವಿಧಾನ ಸೌಧದ ಮುಂದೆ ಸಭೆ ನಡೆಸಲಾಯಿತು ; ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರಿಗೆ ರುಮಾಲು ಮತ್ತು ಶಾಲು ಕೊಡಲಾಯಿತು ; ಇನ್ನೂ ಕೆಲವರಿಗೆ ಶಾಲು ಕೊಡಲಾಯಿತು ;ಶ್ರೀ ನಾಗರಾಜ್‌ರಿಗೆ ಒಂದು ಉಂಗುರ ಮತ್ತು ಶಾಲನ್ನು ಶ್ರೀ ವಿ.ಆರ್. ನಾಯ್ಡುರವರು, ಮುಖ್ಯ ಮಂತ್ರಿಗಳ ಕೈಯಿಂದ ಕೊಡಿಸಿದರು.

ಮೈಸೂರು– ರಾಜ್ಯೋತ್ಸವವು ವಿಜೃಂಭಣೆಯಿಂದ ನೆರವೇರಿತು ; ಶ್ರೀ ಭುವನೇಶ್ವರಿ ಮೆರವಣಿಗೆಯೊಂದಿಗೆ ಅನೇಕ ಳು, ಪೋಲೀಸು ಪರಿವಾರದ, ಹೋಂ ಗಾರ್ಡ್ ಮುಂತಾದವರಿದ್ದರು.

ಚಿಕ್ಕಬಳ್ಳಾಪುರ— ಇಲ್ಲಿ ರಾಜ್ಯೋತ್ಸವ ಅದ್ದೂರಿಯಿಂದ ಆಚರಿಸಲಾಯಿತು ; ಶ್ರೀ ಭುವನೇಶ್ವರಿ ಭಾವಚಿತ್ರದೊಡನೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

★

ಪಾಲ್ಘಾಟ್— ಕಲ್ಲಿಜ್ಜಲ್ಲಿನ ತೀವ್ರ ಅಭಾವದಿಂದ 20 ಪ್ರಯಾಣೀಕರ ಪ್ರಾಣಗಳನ್ನು ನಿಷ್ಪಲವಾಗಿದೆ.

### ಬೆಲೆ ಏರಿಕೆ

ಬೊಂಬಾಯಿ — ಬೆಲೆ ಏರಿಕೆಯು ಸರಕಾರದ ನೀತಿಯಲ್ಲಿಯು ಯಾವ ವಿಫಲತೆಗೂ ಅಲ್ಲವೆಂದೂ, ಆದರೆ ಆ ನಾವೃಷ್ಟಿ, ಬಂಗ್ಲಾದೇಶದ ನಿರಾಶ್ರಿತರ ಸಮಸ್ಯೆ ಮತ್ತು ಕಳೆದ ವರ್ಷದ ಯುದ್ಧವೆಂದೂ ಪ್ರಧಾನಿ ಇಂದಿರಾರವರು ತಿಳಿಸಿರುವರು.

★

### ಸಂಘದ ಆಕ್ರಮಣ

ಬೆಂಗಳೂರು –ಎಂ ಐ ಸಿ ಓ ನೌಕರರ ಸಂಘದ ಕಟ್ಟಡವನ್ನು ಉದ್ಘಾಟಿಸುತ್ತಾ ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್ ರವರು– ಭೂಮಿ ಆಕ್ರಮಣ ಹಳೆಯದಾಯಿತೆಂದೂ ಈಗಿನ ಫ್ಯಾಷನ್ನು ' ಸಂಘ ಆಕ್ರಮಣ" ವಾಗಿದೆಯೆಂದೂ ಹೇಳಿದರು. ತಾವು ತಾವೇ ಕಾರ್ಮಿಕ ನಾಯಕರೆಂದು ಹೇಳಿಕೊಳ್ಳುವವರಿಂದ ಕಾರ್ಮಿಕರು ತಪ್ಪುದಾರಿಗೆ ಎಳೆಯಲ್ಪಟ್ಟು ಸಂಘ ಆಕ್ರಮಣವಾದೀತೆಂದು ಎಚ್ಚರಿಸಿದರು.

●

### ಸಂಚಾರಿ ಹಾಲಿನ ವ್ಯಾನ್

ಬೆಂಗಳೂರು— ನಗರದಲ್ಲಿ ಬೆಂಗಳೂರು ಡೈರಿ ಸಂಚಾರಿ ವ್ಯಾನ್ ಬಿಡುಗಡೆ ಮಾಡುತ್ತಾ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು– ಜನರು ಹಾಲನ್ನು ಕುಡಿಯುವ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಬೇಕೆಂದೂ, ನಮ್ಮ ದೇಶದಲ್ಲಿ ಹಾಲು ಸೇವನೆ ಕಡಮೆಯಾಗಿರುವದೇ ಪೋಷಣಾಂಶ ಕೊರತೆಗೆ ಕಾರಣವೆಂದು ಹೇಳಿದರು.

★

### ಒಳಚರಂಡಿ ಏರ್ಪಾಡು

ಹೊಸಪೇಟೆ— ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು, ರೂ. 765 ಲಕ್ಷದ ಒಳಚರಂಡಿ ಪ್ರಾಜೆಕ್ಟಿಗೆ ಶಂಕುಸ್ಥಾಪನೆ ಮಾಡಿದರು.

●

### ಸಕ್ಕರೆ

ಮೈಸೂರು— ದೀಪಾವಳಿ ಮತ್ತು ತಂಜಾರ್ ಹಬ್ಬಗಳಿಗಾಗಿ ಈ ತಿಂಗಳು ಪ್ರತಿ ಕಾರ್ಡಿಗೆ ಅರ್ಧ ಕೆಜಿ ಸಕ್ಕರೆ ಹೆಚ್ಚಾಗಿ ಕೊಡಲಾಗುವುದಂ.

○

### ರಾಜಮಾತೆಯವರ ಔದಾರ್ಯ

ನವದೆಹಲಿ– ಗ್ವಾಲಿಯರ್ ರಾಜಮಾತೆ ವಿಜಯರಾಜೇ ಸಿಂಧ್ಯರು, ಬೊಂಬಾಯಿನಲ್ಲಿನ ತಮ್ಮ " ಸಮುದ, ಮಹಲ್ " ಗ್ವಾಲಿಯರ್‌ನಲ್ಲಿಯ " ಜಯ ವಿಲಾಸ " ಅರಮನೆಗಳನ್ನೂ, ದೆಲ್ಲೀ ಚಾಣಕ್ಯಪುರಿಯಲ್ಲಿರುವ ವಿಶಾಲ ಭವನವನ್ನೂ ಬಡಜನರಾಗೂ ಸಮಾಜ ದುಃಖಿತ ಜನರಿಗೆ ಅರ್ಪಿಸಿರುವರು.

## ಗಂಡಸರು ಹೆಂಗಸರ ಗುಲಾಮರು.

ಮ್ಯೂನಿಚ್— ಡಾಕ್ಟರು ಮತ್ತು ಸಮಾಜಿಕ ವಿಜ್ಞಾನಶಾಲಿಯಾದ, 36 ವರ್ಷ ಪ್ರಾಯದ, ಅರ್ಜಂಟಿನದಲ್ಲಿ ಹುಟ್ಟಿದ ಎಸ್ತರ್ ವಿಲಾರ್ ಎಂಬಾಕೆ " ತರಬೇತರ ಪಡೆದ ಪುರುಷ ' ವೇಬ ಪುಸ್ತಕವನ್ನು ಬರೆದಿದ್ದಾಳೆ : ಇದಕ್ಕಿದ್ದಷ್ಟು ಗಿರಾಕಿ ಇನ್ಯಾವ ಪುಸ್ತಕಕ್ಕೂ ಇಲ್ಲವೆನ್ನಬಹುದು ; ಹಾಸ್ಯಪರವಾಗಿ ಬರೆದ ಈ ಪುಸ್ತಕ, ಸ್ತ್ರೀಯ ಸುಧಾರಣೆ ಬಗ್ಗೆ ಈಗ ಜರುಗುತ್ತಿರುವ ಮುಷ್ಕರದ ಕುರಿತು ಟೀಕೆ ಮಾಡಿ ಬರೆದ ಪುಸ್ತಕ.

ಅವಳ ಅಭಿಪ್ರಾಯವೇನೆಂದರೆ– ಸ್ತ್ರೀಯು ತನ್ನದನ್ನು ಬಚ್ಚಿಟ್ಟು ಪುರುಷನನ್ನು ಸುಲಿಯುತ್ತಾಳೆ : ಅವಳ ಜೀವನದ ಮುಖ್ಯ ಗುರಿಯೆಂದರೆ, ಗಂಡನನ್ನು ಹುಡುಕಿ ತೆಗೆದು ಅವನನ್ನು ಗುಲಾಮನಂತೆಯೇ ಎಣಿಸಿ ಸ್ವಾರ್ಥಕ್ಕೋಸ್ಕರ ಅವನಿಂದ ಇಡೀ ಜನ್ಮವೆಲ್ಲಾ ಕೆಲಸ ಮಾಡಿಸುವುದು ; ಅವಳು ಅವಸಿಗಾಗಿ ಮಕ್ಕಳನ್ನು ಹೆರುವ ದೇತಕ್ಕೆಂದರೆ ಅವನನ್ನು ಸೆರೆಹಿಡಿದಂತೆ ಮಾಡಲು : ಆದರೂ ಸ್ತ್ರೀಯು ಯಾವಾಗಲೂ ಬುದ್ಧಿಹೀನಳು

ಪುರುಷರು ಸ್ತ್ರೀಯರಿಗಿಂತ ಚತುರರು, ಸೂಕ್ಷ್ಮದರ್ಶಿಗಳು, ಸತ್ಯವಾದಿಗಳು, ನೋಡಲು ಸುಂದರರು ; ಅವರು ಕೆಲಸಮಾಡಿ ಹೊಂದಿರುವ ನಯವಾದ ದೇಹದ ಘಟ್ಟಯಾದ ಭುಜಗಳು, ಸ್ನಾಯುಗಳು ಮನಸೆಳೆಯುವವು : ಅವರ ಬಾಯಿತುಂಬಾ ನಗೆ ಮನಸ್ಸನ್ನು ಉಲ್ಲಾಸಗೊಳಿಸುವುದು.

ಸ್ತ್ರೀ ಸುಧಾರಣ ಸಂಘದ ಮೆಂಬರರು ಇವಳೊಡನೆ ಜಗಳಕ್ಕೆ ತೊಡಗಿದ್ದಾರೆ ಆದರೂ ಅವಳ ಪುಸ್ತಕವನ್ನು ಅನೇಕರು ತಕ್ಕೊಳ್ಳುತ್ತಲಿದ್ದಾರೆ. ಇಷ್ಟರೊಳಗೆ ಅವಳು 300000 ಡಿ ಮಾರ್ಕ್ಸ್ ಹಣವನ್ನು ಪುಸ್ತಕದ ಮಾರಾಟದಿಂದಾಗಿ ಗಳಿಸಿದ್ದಾಳೆ. [ಐ ಪಿ ಎಸ್]


# ಭಾರತದಲ್ಲಿ ಗೋವಧೆ

# ಪೂರ್ಣ ನಿಶೇಧವಾಗಲಿ

**Protect the Cow**

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೂಕ್ತವಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ರವರ ಚೊಚ್ಚಲು ಚಿತ್ರ

# ಆನೆ-ಹುಡುಗ

**Help The Gorakshana**

—Humanitarin Propoganda Monthly—



# ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

# ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 3-11-72 ಶುಕ್ರವಾರ

**ಕಲಾಕ್ಷೇತ್ರ**

| | | |
|---|---|---|
| 6 ರಿಂದ 7 ಸಂಜೆ | ಶ್ರೀಮತಿ ಉಷಾ ಧನಲಾಲ್, ಮೈಸೂರು | ವೀಣೆ |
| 7 ರಿಂದ 9-30 | ಸಿಟ್ಟಿ ಮುನಿಸಿಪಾಲಿಟಿ ಕೆಲಸಗಾರರ ಸಂಘ, ಮೈಸೂರು ನಾಟಕ " ದೇವದಾಸಿ " | |

**ಜೀವನರಾಯನಕಟ್ಟೆ**

| | | |
|---|---|---|
| 6 ರಿಂದ 7 | ಶ್ರೀ ಎಂ. ವಿ. ವೆಂಕಟಪ್ಪ, ಮೈಸೂರು | ಸಂಗೀತ |
| 7 ರಿಂದ 8 | ಶ್ರೀಮತಿ ಎಂ. ಎಸ್. ಲಲಿತ, ಮೈಸೂರು | ಸಂಗೀತ |
| 8 ರಿಂದ 9-30 | ಶ್ರೀ ಎಸ್. ಸುಬ್ರಹ್ಮಣ್ಯಂ, ಬೆಂಗಳೂರು | ವೀಣೆ |



# SHAKTI SUDHA

**A Superb Tonic**



**Contribute Liberally to the National Defence Fund**



Quality Printing Neat Binding

**Lakshminarasimha Press**

Sivarampet, Mysore